ಎಂಬ ಅಪವಾದ ಹೊತ್ತ ವೆಂಕಣ್ಣ ತನಗೆ ಸಂಗೀತ ಕಲಿಸಬಲ್ಲ ಗುರುವಿಗಾಗಿ ಹಂಬಲಿಸುತ್ತಿರುವಾಗ ಎತ್ತಲಿಂದಲೋ ಸುಳಿದು ಬಂದ ತಂಗಾಳಿಯಲ್ಲಿ ಮಧುರ ರಾಗಾಲಾಪದ ಅಲೆಯೊಂದು ತೇಲಿಬಂದು ಅವನ ಕಿವಿಯನ್ನು ಸೋಂಕಿದಾಗ ಥಟ್ಟನೆ ಮಿಂಚು ಸೋಂಕಿದವನಂತೆ ಹಾಸಿಗೆಯಿಂದ ಎದ್ದು ರಾಗಾಲಾಪನೆಯನ್ನು ಹಿಂಬಾಲಿಸಿ ಸದಾನಂದ ಬುವಾ ಅವರ ಕಾಲಮೇಲೆ ಉರುಳಿ, ಸಂಗೀತ ಕಲಿಸುವಂತೆ ಕೋರಿ ನಿರ್ಲಕ್ಷ್ಯಕ್ಕೆ ಒಳಗಾದರೂ, ನಂತರ "ಗುರುವಿನ ಗುಲಾಮನಾಗದ ತನಕ ದೊರೆಯದಣ್ಣ ಮುಕುತಿ" ಎಂದು ಹಿಂಬಾಲಿಸಿ, ಒದೆಸಿಕೊಂಡರೂ, ಬಿಡದೆ ಕೊನೆಯವರೆಗೂ ಅವರನ್ನು ಹಿಂಬಾಲಿಸಿ, ಸಂಗೀತ ಕಲಿಯುವ ಕ್ರಿಯೆ ಇದೆಯಲ್ಲ, ಅದರುದ್ದಕ್ಕೂ ಹಾದು ಬರುವ ಸಂಗೀತದ ನಾದದಲ್ಲೇ ಅಯ್ಯರ್ ಎಲ್ಲವನ್ನೂ ಕಟ್ಟಿಕೊಡುತ್ತಾರೆ. ಈ ಇಡೀ ಪ್ರಕ್ರಿಯೆಯಲ್ಲಿ ಸಂಗೀತದ ಬನಿಯ ಹೊರತು, ಮತ್ತೊಂದು ಮಾತಿಲ್ಲ, ಕಥೆಯಿಲ್ಲ. ಅಕಸ್ಮಿಕವಾಗಿ ಇದ್ದರೂ, ಅದು ಕ್ಲುಪ್ತರೂಪದ್ದು. ಆ ಭಾಗವನ್ನು ನೋಡುವಾಗ ಪ್ರೇಕ್ಷಕನಿಗೆ ಅನ್ನಿಸುವುದು, "ನಾದಮಯ ಈ ಲೋಕವೆಲ್ಲ ನಾದಮಯ...."

ಅಂತಿಮವಾಗಿ ಟಿಪ್ಪುವಿನ ಒತ್ತಾಯಕ್ಕೆ ಮಣಿಯದೆ, ಬೆದರಿಕೆಗೆ ಜಗ್ಗದೆ, ತಾನು ನಂಬಿದಂತೆ ದೇವಿ ಸನ್ನಿಧಿಯಲ್ಲಿ ಹಾಡುವ ವೆಂಕಣ್ಣ "ಅಂಬಾ ತವಪದಾಂಭೋಜ..."ದೊಂದಿಗೆ ಆರಂಭವಾಗುವ ಗಾಯನ ಹೃದಯ ಕಿತ್ತುಬರುವಂತೆ ರೂಪಿತಗೊಂಡಿದೆ. ಈ ದೃಶ್ಯದಲ್ಲಿ ಅನಂತ್‌ನಾಗ್ ಮೈದುಂಬಿ ಅಭಿನಯಿಸಿ, ಪ್ರೇಕ್ಷಕರ ಹೃದಯ ಗೆಲ್ಲುತ್ತಾರೆ. ಗಾಯನ ಕೇಳುತ್ತಾ ಕೇಳುತ್ತಾ, ಅಂತಿಮವಾಗಿ ವೆಂಕಟಸುಬ್ಬಯ್ಯ ನಾಲಿಗೆ ಕತ್ತರಿಸಿಕೊಂಡಾಗಿ ಹಾಡು ನಿಲ್ಲುವ ದೃಶ್ಯವಿದೆಯಲ್ಲ - ಅದು ಪ್ರೇಕ್ಷಕರ ಮತ್ತು ಸಂಗೀತ ಬಲ್ಲವರ ನಾಲಿಗೆ ತುಂಡಾದಂಥ ಭಾವ ಕಾಡುತ್ತದೆ. ಅಂತಿಮವಾಗಿ ಕಾದಂಬರಿಯಲ್ಲಿ ತ.ರಾ.ಸು. ಅವರು ಹೇಳುವಂತೆ, "ಹಾಡೆಲ್ಲಿ ಬಿಟ್ಟಿದ್ದರು? ಬಾಯಿ ಹೋದರೂ, ಮೂಗಿನಲ್ಲೇ ಹಾಡುತ್ತಿದ್ದರಂತೆ. ಅವರ ಶ್ವಾಸೋಚ್ಛ್ವಾಸವೂ ಸಂಗೀತದ ಹಾಗೇ ಇರುತ್ತಿತ್ತಂತೆ. ಅವರು ಸಾಯುವಾಗ ಅವರ ಮುಖದಿಂದ ಉಸಿರಾಗಿ ಭೈರವಿ ರಾಗ ಹೊರಹೊಮ್ಮುತ್ತಿತ್ತಂತೆ...." ಈ ಭಾವ ಕೂಡ ಪ್ರೇಕ್ಷಕರನ್ನು ಕಾಡುತ್ತದೆ.

'ಹಂಸಗೀತೆ'ಗೆ ಖ್ಯಾತ ಸಂಗೀತ ನಿರ್ದೇಶಕ ಟಿ.ಜಿ. ಲಿಂಗಪ್ಪ ರಾಗಸಂಯೋಜನೆ ಮಾಡಿದ್ದರೆಂದು ಒಂದು ನಂಬಿಕೆ. ಆದರೆ ಚಿತ್ರದ ಸಂಗೀತ ಬಾಲಮುರಳಿ ಕೃಷ್ಣ, ಹಿನ್ನೆಲೆ ಸಂಗೀತ ಬಿ.ವಿ. ಕಾರಂತರು ಎಂದಿದೆ. ಟಿ.ಜಿ. ಲಿಂಗಪ್ಪ ಜಯದೇವನ ಅಷ್ಟಪದಿಗಳಿಗೆ ರಾಗ ಸಂಯೋಜನೆ ಮಾಡಿದರೆಂದು, ಹೆಸರು ತೋರಿಸುವಾಗ ಚಿತ್ರದಲ್ಲಿ ತೋರಿಸಲಾಗುತ್ತದೆ. ಆಗ ಬರುತ್ತಿದ್ದ ಕ್ಯಾಸೆಟ್‌ಗಳ ಇನ್-ಲೇ ಕಾರ್ಡ್‌ನಲ್ಲಿ ಕೂಡ ಹಾಗೆಯೇ ತೋರಿಸಲಾಗಿದೆ. ಸತ್ಯವೇನೆಂದು ಇದುವರೆಗೆ ಯಾರೂ ಹೇಳುತ್ತಿಲ್ಲ. ಆದರೆ ಟಿ.ಜಿ. ಲಿಂಗಪ್ಪನವರಿಗೆ ತಾವು ಕೊಡಬೇಕಿದ್ದ ಹಣ ಕೊಟ್ಟಿರುವುದಾಗಿ ಅಯ್ಯರ್ ಹೇಳಿಕೊಂಡಿದ್ದಾರೆ. ದೊಡ್ಡವರ ಈ ದೊಡ್ಡ ರಹಸ್ಯಗಳನ್ನು ಕೆಣಕದಿರುವುದೇ ಉತ್ತಮ.

## ಗಾಯನದೊಂದಿಗೆ ನರ್ತನ ಬೆರೆತು

ಕೇವಲ ಸಂಗೀತಕ್ಕಾಗಿ 'ಹಂಸಗೀತೆ' ನಮ್ಮನ್ನು ಕಾಡುವುದಿಲ್ಲ. ಸಂಗೀತದ ಜೊತೆಜೊತೆಗೇ ನೃತ್ಯ ಪರಂಪರೆಯ ಪರಿಚಯ ಮತ್ತು ಆ ಕಾಲದ ವಿದ್ವತ್ತಿನ ಪರಿಚಯ ಕೂಡ ಪ್ರೇಕ್ಷಕರಿಗಾಗುತ್ತದೆ. ಚಿತ್ರದುರ್ಗಕ್ಕೆ ತಂಜಾವೂರಿನ ನರ್ತಕಿಯೊಬ್ಬಳು ಬಂದು ತನ್ನೊಂದಿಗೆ ಸ್ಪರ್ಧಿಸಬಲ್ಲ ಪ್ರತಿಭಾವಂತರು ದುರ್ಗದಲ್ಲಿದ್ದಾರೆಯೇ ಎಂದು ಸವಾಲೊಡ್ಡುವ ದೃಶ್ಯವನ್ನು ಅಯ್ಯರ್ ಚಿತ್ರದ ಪರಿಣಾಮ ಹೆಚ್ಚಿಸಲು ಬಳಸಿಕೊಳ್ಳುತ್ತಾರೆ. ತಂಜಾವೂರಿನ ನರ್ತಕಿ ತನ್ನ ನೃತ್ಯ ಪಾಂಡಿತ್ಯಕ್ಕೆ ಜಯದೇವನ ಅಷ್ಟಪದಿ "ಲಲಿತ, ಲವಂಗ ಲತಾ ಪರಿಶೀಲನಾ ಕೋಮಲ ಮಲೆಯ ಸಮೀರೆ..." ಗಾನವನ್ನು ಆಯ್ದುಕೊಂಡು ಭರತನಾಟ್ಯ ಪರಂಪರೆಯನ್ನು ಪರಿಚಯಿಸುತ್ತಾಳೆ. ಅವಳಿಗೆ ಸವಾಲೊಡ್ಡುವ ದುರ್ಗದ ನರ್ತಕಿ ಅದೇ ಗೀತಗೋವಿಂದದ "ನಾಮ ಸಮೇತಂ ಕೃತ - ಸಂಕೇತಂ ವಾದಯತೇ ಮೃದುವೇನಂ. ಬಹು ಮನು ತೇ ನನು ತೇ ತನು ತೇ ತನು ಸಗತ ಪಾವನ ಚಲಿತಂ ಅಪಿ ರೇಣುಂ..." ಆಯ್ಕೆ ಮಾಡಿಕೊಂಡು ನರ್ತಿಸುತ್ತಾಳೆ. ತಂಜಾವೂರಿನ ನರ್ತಕಿ ಸೋಲೊಪ್ಪುವುದು ಸಿನಿಮೀಯವಾದರೂ, ಮುಂದಿನ ಕಥೆಗೆ, ಅಂದರೆ ವೆಂಕಟಸುಬ್ಬಯ್ಯ-ಚಂದ್ರಳ ಸಮಾಗಮಕ್ಕೆ ಅಡಿಪಾಯವಾಗುತ್ತದೆ.